Misc. No. 3/2017
PW 01 (ಗಿರಿಜಮ್ಮ)

ದಿನಾಂಕಃ 25.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ – ಶ್ರೀ ASP ವಕೀಲರಿಂದ.

ನನ್ನ ಆಸ್ತಿ ಎಂದು ಹೇಳಲು ಬಂದಿರುತ್ತೇನೆ. ನನ್ನ ಪರವಾಗಿ ಹಾಕಿರುವ ಅರ್ಜಿ ಏನು ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಗಂಡ ಜೀವಂತ ಇದ್ದಾಗ ಈ ಅರ್ಜಿಯನ್ನು ನಡೆಸಲು ಬರುತ್ತಿದ್ದರು ಎಂದರೆ ಹೌದು. ಆತ ಜೀವಂತ ಇದ್ದಾಗ ಈ ಪ್ರಕರಣದ ಬಗ್ಗೆ ನನಗೆ ಹೇಳುತ್ತಿದ್ದರು ಎಂದರೆ ಹೌದು. ನನ್ನ ಗಂಡ ತೀರಿಕೊಂಡು 2 ವರ್ಷ ಆಗಿದೆ. ಆತ ಜೀವಂತ ಇದ್ದಾಗ ಈ ಅರ್ಜಿಯನ್ನು ನಡೆಸುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ.

ಸಾಕ್ಷಿಗೆ ಬಾಲಪ್ಪ ತಂದೆ ಗಿಡ್ಡಪ್ಪನ ಮತದಾರ ಪಟ್ಟಿಯ ಪ್ರತಿಯನ್ನು ತೋರಿಸಿ ಈತ ಬಾಲಪ್ಪ ತಂದೆ ಗಿಡ್ಡಪ್ಪ ಎಂದರೆ ಸಾಕ್ಷಿ ಅಲ್ಲ ಎಂದು ನುಡಿದಿರುತ್ತಾರೆ. ಆ ಪಟ್ಟಿಯಲ್ಲಿರುವುದು ನನ್ನ ಗಂಡ ಅಲ್ಲ ಎಂದರೆ ಹೌದು. 2017 ರಿಂದ ಬಾಲಪ್ಪ ತಂದೆ ಗಿಡ್ಡಪ್ಪ ಮೃತಪಡುವವರೆಗೂ ನನಗೆ ಮಿಸಲೇನಿಯಸ್ ಅರ್ಜಿಯ ಬಗ್ಗೆ ನನಗೆ ಗೊತ್ತಿದ್ದರು ನಾನು ತಡವಾಗಿ ವಾರಸುದಾರರ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.